ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE 4/4/2021

## ಒಡಿಶಾ ವಿಧಾನಸಭೆ ಸ್ಪೀಕರ್ ಪೀಠದತ್ತ ಚಪ್ಪಲಿ, ಕಾಗದ ಎಸೆತ!

ಭುವನೇಶ್ವರ: ಒಡಿಶಾ ಸಭಾಪತಿ ಪೀಠದತ್ತ ಕೆಲ
ವಿಪಕ್ಷ ಸದಸ್ಯರು ಚಪ್ಪಲಿ, ಇಯರ್‌ಫೋನ್
ಎಸೆದು ಅಗೌರವ ತೋರಿದ ಘಟನೆಗೆ ಒಡಿಶಾ
ವಿಧಾನಸಭೆ ಸಾಕ್ಷಿಯಾಗಿದೆ. ಶನಿವಾರ ವಿಧಾನ
ಸಭೆಯಲ್ಲಿ ಲೋಕಾಯುಕ್ತ (ತಿದ್ದುಪಡಿ) ಮಸೂದೆ
ಯನ್ನು ಚರ್ಚೆ ಇಲ್ಲದೆ ಅನುಮೋದಿಸಲಾಗಿತ್ತು.
ಇದಕ್ಕೂ ಮುನ್ನ ಸಭಾಪತಿ ಎಸ್.ಎನ್.ಪಥ್ರೋ
ಗಣಿಗಾರಿಕೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಚರ್ಚೆ
ಮನವಿ ತಿರಸ್ಕರಿಸಿದ್ದರು. ಇದರಿಂದ ಆಕ್ರೋಶ
ಗೊಂಡ ಇಬ್ಬರು ಬಿಜೆಪಿ ಶಾಸಕರಾದ ಮಿಶ್ರಾ
ಮತ್ತು ಸೇಥಿ ತಮ್ಮ ಕುರ್ಚಿಯ ಮೇಲೆ ನಿಂತು
ಸಭಾಪತಿ ಪೀಠದೆಡೆಗೆ ಚಪ್ಪಲಿ, ಕಾಗದ, ಪೆನ್ನು,
ಕಸದ ಬುಟ್ಟಿ ಮತ್ತು ಇಯರ್‌ಫೋನ್ ಎಸೆದರು.